ಕೌಶಿಕ್ ರಾಜ್, ಹನುಮನಾಳು

ಪ್ರೇಯಸಿಯ ಕನಸಿಗೂ, ಹೆಂಡತಿಯ ಕನಸಿಗೂ ಇರುವ ವ್ಯತ್ಯಾಸವೇನು?



ಅದು ಕಾಮನಬಿಲ್ಲು, ಇದು ಬೆಳದಿಂಗಳು.

ಫಾಲನೇತ್ರ ಸಜ್ಜನ, ಶಿರಸಿ

ನಟರೊಬ್ಬರು ಶೃಂಗಾರ ರಸದ ಅಭಿನಯಕ್ಕೆ ಕ್ಯಾಮೆರಾ ಅಡ್ಡ ಬರುತ್ತದೆ ಎನ್ನುವರಲ್ಲಾ...?

ಓಹ್! ಅವರ ಅಭಿನಯ ಸಿನಿಮಾಗೆ ಸೀಮಿತವಾಗದೆ ನಿಜಜೀವನಕ್ಕೂ ಮುಂದುವರೆದಿದೆ ಎಂದಾಯ್ತು!

ಬಾ.ರಂ. ಸುರೇಶ, ಶಿವಮೊಗ್ಗ

ಲಾಕ್‌ಡೌನ್ ಅನ್‌ಲಾಕ್ ಆದಾಗ ಮದ್ಯ ಖರೀದಿಸಲು ಹೆಣ್ಮಕ್ಕಳೂ ಕ್ಯೂ ನಿಂತದ್ದು ಏನನ್ನು ತೋರಿಸುತ್ತದೆ?

ಹೆಂಡದ ವಿಷಯದಲ್ಲಿ ಹೆಣ್ಣು ಸಮಾನತೆ ಗಳಿಸಿದ್ದಾಳೆ ಎಂದು.

ಸುಭೀಕ್ಷ ಆರ್. ತಿ. ನರಸೀಪುರ

ದೇವತೆಗಳಿಗೆ ಎರಡೇ ಕಾಲು, ಕೈ ಎರಡಕ್ಕಿಂತ ಹೆಚ್ಚು ಇರುತ್ತವೆ. ಏಕೆ?



ಏಕಕಾಲದಲ್ಲೇ ಬೇಡುವ ನೂರಾರು ಭಕ್ತರ ಬೇಡಿಕೆ ಸರಬರಾಜು ಮಾಡಲು.

ತೂರಗಲ್ಲ ಉಮೇಶ, ರಾಮದುರ್ಗ

ರಾಜಕಾರಣಿಗಳ ಕೋಳಿಜಗಳ ನಮಗೆ ಮೋಜು ಎನಿಸುತ್ತದೆ. ನಿಮಗೆ?

ಹೊಣೆ ಹೊರಬೇಕಾದವರು ಹೆಣ ಹೊರಲು ಲಾಯಕ್ಕಾದರಲ್ಲಾ ಎನಿಸುತ್ತದೆ.

ಗುರು, ಕೋಟೇಶ್ವರ

ಕಷ್ಟದ ಸಮಯದಲ್ಲಿ ಆಗದಿದ್ದವರು ಕಟ್ಟಿಗೆಯ ಮೇಲೆ ಮಲಗಿದಾಗ ಕಣ್ಣೀರು ಸುರಿಸುವುದೇಕೆ?

ಡಿಪಾರ್ಟ್‌ಮೆಂಟೇ ಬೇರೆಯಾದ್ದರಿಂದ. ನೆರವಾಗದಿದ್ದದ್ದು ಬುದ್ಧಿ. ಅತ್ತದ್ದು ಹೃದಯ.

ನರಸಿಂಹ ಪೈ, ಕಾಸರಕೋಡ

ಶಿಕ್ಷಕರನ್ನು ಶಿಲ್ಪಿಗೆ ಹೋಲಿಸುತ್ತಾರೆ. ಏಕೆ?

ಅಪಕ್ವ ವಿದ್ಯಾರ್ಥಿಗಳನ್ನು ಹದಕ್ಕೆ ತರುವ ಒತ್ತಡದ ಕಾರಣ ಕುಕ್ಕರ್‌ನ ಶಿಳ್ಳೆಯಂತೆ ಕೂಗಬೇಕಾದ್ದರಿಂದ.

ಅನಸೂಯ ಟಿ. ಕೇದಿಗೆಮನೆ

ಹೆಸರು, ಹಣ, ಅಧಿಕಾರ; ಈ ಮೂರರ ಜೊತೆ ಸದ್ಗುಣಗಳನ್ನು ಕಾಣಲು ಸಾಧ್ಯವಿಲ್ಲವೆ?

ನೆಟ್‌ನಲ್ಲಿ 'ಕೆಎಎಲ್‌ಎಂ' ಟೈಪಿಸಿ ಬ್ರೌಸ್ ಮಾಡಿ. ಉತ್ತರ ಸಿಗುತ್ತದೆ.

ಕೆ.ವಿ. ಕಾಳೀಹುಂಡಿ ಶಿವಕುಮಾರ್, ಮೈಸೂರು

ನಮ್ಮ ಮಸ್ತಕವನ್ನು ತುಂಬುವ ಪುಸ್ತಕಗಳನ್ನು ಕೊಳ್ಳುವುದು, ಓದುವುದು ಕಡಿಮೆಯಾಗಿದೆಯಲ್ಲಾ...?

ಹ್ಞ! ಇದು ಕನ್ನಡಿಗರ ಸಮಸ್ಯೆಯಲ್ಲ, ಗುಣ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

ಸರಗಳ್ಳತನ ಹೆಚ್ಚುತ್ತಿದ್ದರೂ ಮಹಿಳೆಯರಿಗೇಕೆ ಬಂಗಾರದ ಮೇಲಿನ ಮೋಹ ಕಡಿಮೆಯಾಗಿಲ್ಲ?

ವ್ಯಾಮೋಹಕ್ಕೆ ವಿವೇಚನೆಯ ಹಂಗಿಲ್ಲವಾದ್ದರಿಂದ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಸಾವಿನ ದೇವತೆಯಾಗಿದ್ದರೂ ಯಮನನ್ನು ಯಮಧರ್ಮರಾಜ ಎಂದು ಗೌರವದಿಂದ ಕರೆಯಲು ಕಾರಣ?

ದುರ್ಬಲ ವೃದ್ಧಾಪ್ಯದಿಂದ ಬಿಡುಗಡೆ ಕೊಡುವ ಶ್ರೇಷ್ಠ ಕಾರ್ಯ ಮಾಡುವುದರಿಂದ.

ಎ.ಕೆ. ಪಟ್ಟಾಭಿ, ಬೆಂಗಳೂರು

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ. ಪಾಪ! ಎಮ್ಮೆ ಏನು ತಪ್ಪು ಮಾಡಿತ್ತು?

ಆಕ್ಸಿಡೆಂಟ್ ಮಾಡೋದು ಹೀರೊ; ಜೈಲಿಗೆ ಸೇರೋದು ಯಾರೋ! ಕೆಲವೊಮ್ಮೆ ಸಾಮೀಪ್ಯವೇ ಅಪರಾಧ.

ಅಶೋಕ ಆರ್. ಹಾಲಣ್ಣವರ, ಲಕ್ಷ್ಮೇಶ್ವರ

ಮಹಿಳೆಯರ ಚರ್ಮಕ್ಕೂ, ಪುರುಷರ ಚರ್ಮಕ್ಕೂ ಇರುವ ವ್ಯತ್ಯಾಸವೇನು ಗುರುಗಳೆ?

ವ್ಯಾಕ್ಸಿಂಗ್, ಥ್ರೆಡಿಂಗ್, ಮೇಕಪ್.

## ವಾರದ ಪ್ರಶ್ನೆ

ಜಯಶ್ರೀ, ಬೆಂಗಳೂರು

ಚಲನಚಿತ್ರವನ್ನು ಬೆಳ್ಳಿಪರದೆಯ ಬದಲು ಚಿನ್ನದ ಪರದೆಯ ಮೇಲೆ ನೋಡಿದರೆ ಹೇಗಿರಬಹುದು?

ಇಡೀ ಚಲನಚಿತ್ರಕ್ಕೆ ಕಾಮಾಲೆ ಬಂದಂತೆ ಕಾಣಬಹುದು.

ಮೈಸೂರು ಕುಸುಮ, ಶ್ರವಣಬೆಳಗೊಳ

ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತದೆ ಎನ್ನುವುದಕ್ಕೆ ಕೊರೊನಾ, ಚೀನಾ ಉದಾಹರಣೆಯಲ್ಲವೆ?

ಮೇಳ, ಜಾತ್ರೆ, ಚುನಾವಣೆಗಳೆಂದು ಗುಂಪುಗೂಡಿ ಎರಡನೇ ಅಲೆ ಹೊರಡಿಸಿದ್ದೂ ಅಷ್ಟೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಸಾಕ್ಷಿ ಇಲ್ಲದೆ ಗಲ್ಲಿಗೇರಿಸಬಹುದೆಂದು ಕಾನೂನಾದರೆ ಮೊದಲು ಗಲ್ಲಿಗೇರುವವರು ಯಾರು?

ಪ್ರಧಾನಿಗಳೇ – ಆ ಹುದ್ದೆಯವರು ಎದುರಿಸುವಷ್ಟು ಅವಿವೇಕವನ್ನು ಇನ್ನಾರೂ ಎದುರಿಸರು.

ವಿ. ಹೇಮಂತಕುಮಾರ್, ಬೆಂಗಳೂರು

ಸ್ಮಾರ್ಟ್ ಫೋನ್ ಇಲ್ಲದವರು ರಾತ್ರಿ ಬೇಗ ಮಲಗುತ್ತಾರಂತೆ. ಹೌದಾ ಸರ್?



ಟೀವಿ, ಲ್ಯಾಪ್‌ಟಾಪ್‌ಗಳನ್ನು ಬೇಗ ಬಂದ್ ಮಾಡುವಷ್ಟು ಸ್ಮಾರ್ಟ್‌ಗಿದ್ದರೆ ಮಾತ್ರ.

ಮಾಧವ ಶಾಂತಮೂರ್ತಿ ಶ್ಯಾನುಭಾಗ

ನೀರು, ನೀರೆಯರೊಂದಿಗೆ ಚೆಲ್ಲಾಟ ಆಡಬಾರದು ಎಂದು ಹೇಳಲು ಕಾರಣವೇನು?

ಅವೆರಡೂ ಮಲಿನವಾದರೆ ಸಮಾಜಕ್ಕೇ ಕೇಡಾಗುವುದರಿಂದ.

ಕೆ.ಹೆಚ್. ತೇಜೇಶ್‌ಚಂದ್ರ, ತುಮಕೂರು

ಚಿತ್ರಹಿಂಸೆ ಎಂಬ ಪದಪ್ರಯೋಗ ಹೇಗೆ ಸೃಷ್ಟಿ ಆಯಿತು?

ಕೆಟ್ಟ ಸಿನಿಮಾಗಳನ್ನು ನೋಡಿ ತಡೆಯದಾದಾಗ.

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in